ಶ್ರೀ ಎಚ್. ಎನ್. ನಂಜೇಗೌಡ.—ಈ ರಿಯಾಯಿತಿಯಮ್ನು ಎರಡು ಕಂಪೆನಿಗಳಿಗೆ ಕೊಟ್ಟ ಮೇಲೆ ಎಸ್ಟಿಮೇಟ್ ಬದಲಾಯಿಸಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಇಲ್ಲವೆಂದು ಕಾಣುತ್ತದೆ. ಇನ್ನೂ ಕೆಲಸ ಮುಗಿದಿಲ್ಲ. ಬೇಕಾದರೆ ವಿಚಾರ ಮಾಡಿ ಹೇಳಬೇಕು.

Sri K. H. PATIL.—In answer to (*c*) it is stated 'Yes'. Now the Chief Minister says tenders have not been called for. May I know which of the two is correct.

ಶ್ರೀ ವೀರೇಂದ್ರ ಪಾಟೀಲ್.—ಯೆಸ್ ಎಂದು ಹೇಳಲಾಗಿದೆ. ಈಗ ಟೆಂಡರ್ ಇಲ್ಲ, ಕೊಟೇಷನ್ ಕರೆದಿದೆ ಎಂದು ಕ್ಲಾರಿಫೈ ಮಾಡಿದ್ದೇನೆ.

ಅಧ್ಯಕ್ಷರು.—ಪ್ರಶ್ನೆ 322—ಸದಸ್ಯರು ಹಾಜರಿಲ್ಲ.

ಶ್ರೀ ಎಂ ಎಚ್. ಜಯಪ್ರಕಾಶ್ ನಾರಾಯಣ್.—ಅವಕಾಶ ಸಿಕ್ಕಿದರೆ ಕೊನೆಯಲ್ಲಿ ಈ ಪ್ರಶ್ನೆಯನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ನೋಡೋಣ.

Famine Relief Works

325. Sri N. HUTCHMASTY GOWDA (Huliyurdurga).—

Will the Minister for Revenne be pleased to state:—

(*a*) the amount spent during 1968 up to 1st December 1968 in Mysore State towards famine relief works (Districtwise and talukwise information may please be furnished);

(*b*) the items to which the said amount has been spent together with the amo..t spent for each item ?

Sri H. V. KOUJALGI (Minister for Revenue).—

(*a*) Amount spent—6.96 Crores of rupees. The details regarding the amount spent in respect of "64 Famine Relief" works and contour bunds is given in the list appended. Taluk-war details have not been collected. More time is required for the same.

		(In crores of rupees)
(*b*)	(1) Famine Relief works	2.71
	(2) Contour bund works	1.14
	(3) Minor Irrigation	2.18
	(4) Implementing emergency foodgrains supply programme in the famine stricken areas, for children under 14 years and women under antenatal and postnatal period.	0.50
	(5) Free supply of red Jowar	0.20
	(6) To purchase air compressor and explosive equipments.	0.23
	Total ...	6.96

(SRI H. V. KOUJALGI)

STATEMENT

	District		Famine Relief Works	Contour bund Works
1	2		3	4
			Rs.	Rs.
1	Bangalore	...	16,03,815	2,77,000
2	Kolar	...	22,54,625	4,08,000
3	Tumkur	...	22,33,778	27,40,000
4	Chitradurga	...	17,74,486	24,06,000
5	Shimoga	...	2,78,816	...
6	Mandya	...	12,57,758	6,47,000
7	Mysore	...	16,78,906	1,99,000
8	Hassan	...	11,03,345	2,37,000
9	Chickmagalur	...	13,91,875	2,44,000
10	Coorg	...	82,959	...
11	Belgaum	...	29,24,135	9,54,000
12	Dharwar	...	21,69,574	9,70,000
13	Bijapur	...	43,65,215	5,40,000
14	Gulbarga	...	5,68,511	7,21,000
15	Raichur	...	17,34,588	7,52,000
16	Bidar	...	8,03,284	98,000
17	Bellary	...	8,87,156	2,28,000
		Total ...	2,71,12,826	1,14,21,000

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಶ್ನೆ ಕೇಳಿದ ಮೂಲ ಉದ್ದೇಶ ತಾಲ್ಲೂಕುವಾರು ಅಂಕಿಅಂಶ ಬೇಕೆಂಬುದು. ಅದನ್ನು ಕೊಟ್ಟಿಲ್ಲ. ಕಳೆದ ಅಧಿವೇಶನದಲ್ಲಿ 2—3 ಜಿಲ್ಲೆಗಳ ಬಗ್ಗೆ ಕೊಡಲಾಗಿದೆ. ಈ ಅಧಿವೇಶನದಲ್ಲಿ ಇನ್ನೊಂದು ದಿನ ಈ ವಿವರವನ್ನು ಕೊಡುತ್ತೀರಾ ?

†Sri H. V. KOUJALGI.—The statement has been prepared in the form of Booklet and it has been distibuted to the members. If the hon. Member wants still more information, I will try to give.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರಶ್ನೆಯಲ್ಲಿ ಕೇಳಿರುವ ಬಾಬುಗಳಿಗೆ ತಾಲ್ಲೂಕುವಾರು ತಪಶೀಲು ಕೊಟ್ಟಿಲ್ಲ. ಕ್ಷಾಮ ಪರಿಹಾರ ಕಾರ್ಯ ಮಾಡಿದಾಗ 6 ಖಟಂಗಳಿಗೆ ಖರ್ಚುಮಾಡಿದ್ದಾರೆ. ಅದಕ್ಕೆ ತಾಲ್ಲೂಕುವಾರು ಅಂಕಿಅಂಶ ಕೊಟ್ಟು ಈ ಪ್ರಶ್ನೆಯನ್ನು ಈ ಅಧಿವೇಶನದಲ್ಲಿ ಇನ್ನೊಂದು ದಿನ ತೆಗೆದುಕೊಳ್ಳಬೇಕು.

Sri H. V. KOUJALGI.—It is a laborious work, Sir. However, so far as his taluk is concerned, I will supply.

† Indicates that the speeches or remarks have not been revised by the member concerned.

Sri N. HUTCHMASTY GOWDA.—I am not particular of my taluk. ಅನೇಕ ತಾಲ್ಲೂಕುಗಳಿಗೆ ಅವರು ತೋರಿಸಿದ್ದರಲ್ಲಿ ತಾರತಮ್ಯ ಇದೆ ಎಂಬ ಉದ್ದೇಶದಿಂದ ಪ್ರಶ್ನೆ ಕೇಳುತ್ತಾ ಇದ್ದೇನೆ. ಆ ಮೂಲ ಉದ್ದೇಶಕ್ಕೇ ಧಕ್ಕೆ ಬರುವುದಾದರೆ ಅವರು ತಮ್ಮ ಇಚ್ಛೆ ಬಂದ ಹಾಗೆ ಮಾಡಬಹುದು, ಇದು ನನ್ನದೇ ಒಂದು ತಾಲ್ಲೂಕಿಗೆ ಕೇಳುವ ಪ್ರಶ್ನೆ ಅಲ್ಲ.

Mr. SPEAKER.—Is it not possible for the Hon. Minister to place a statement on the Table of the House ?

Sri H. V. KOUJALGI.—I will see, Sir.

ಶ್ರೀ ಸಿ. ಆರ್. ರಂಗೇಗೌಡ.—1—12—68ರಲ್ಲಿ ಬೆಂಗಳೂರು ಜಿಲ್ಲೆಗೆ 18 ಲಕ್ಷ 80 ಸಾವಿರ ರೂಪಾಯಿ ಖರ್ಚು ಮಾಡಿದೆ ಎಂದು ಹೇಳಿದ್ದೀರಿ. ಮಾಗಡಿ ಮತ್ತು ರಾಮನಗರ ತಾಲ್ಲೂಕಿನಲ್ಲಿ ಸುಮಾರು 50—60 ಜನ ರಿಲೀಫ್ ಕಾಮಗಾರಿಗಳನ್ನು ಕೈಕೊಂಡವರಿಗೆ ಇದುವರೆಗೂ ಹಣ ಪಾವತಿ ಮಾಡಿಲ್ಲ. ಅದನ್ನು ಅತಿ ಜರೂರಾಗಿ ಕೊಡಿಸುತ್ತೀರಾ ? ಹಣ ಮುಗಿದಿದೆಯೇ ? ಹಣ ಇದ್ದರೆ ಏಕೆ ಇದುವರೆಗೂ ಕೊಡಲಿಲ್ಲ ?

ಶ್ರೀ ಎಚ್. ವಿ. ಕೌಜಲಗಿ.—ಈಗ 8 ದಿವಸದ ಕೆಳಗೆ ಹಣ ಒದಗಿಸಿಕೊಟ್ಟಿದೆ. ಡಿವಿಜನರ್ ಕಮಿಷನರು ಇಷ್ಟರಲ್ಲಿ ಆ ಹಣ ಕೊಟ್ಟಿರಬಹುದು.

ಶ್ರೀ ಎಸ್. ಶಿವಪ್ಪ.—ತಾವು ಅಭಾವ ಪರಿಸ್ಥಿಯ ಪರಿಹಾರ ಕಾಮಗಾರಿಗಳಿಗೆ ಸುಮಾರು 8 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದು ನವೆಂಬರ್ 67ರ ಕೊನೆಯವರೆಗೂ ಬಹಳ ಭರಾಟೆಯಿಂದ ನಡೆದು ತಾಲ್ಲೂಕು ಬೋರ್ಡು ಚುನಾವಣೆಗಳು ಮುಗಿದ ತಕ್ಷಣವೇ ಎಲ್ಲಾ ಕಡೆಯಲ್ಲೂ ನಿಲ್ಲಿಸಿದರಲ್ಲಾ ಇದರ ಅರ್ಥವೇನು ?

ಶ್ರೀ ಎಚ್. ವಿ. ಕೌಜಲಗಿ.—ತಾಲ್ಲೂಕು ಬೋರ್ಡು ಎಲೆಕ್ಷನ್ ಆದಕೂಡಲೇ ನಿಂದರಿಸಿಲ್ಲ. ಎಲೆಕ್ಷನ್ ಕಾಲಕ್ಕೆ ಆಫೀಸರ್ರು ಎಲೆಕ್ಷನ್ ಕಡೆಗೆ ಲಕ್ಷ್ಯ ಕೊಡಬೇಕಾಗುತ್ತದೆ ಅದಕ್ಕೆ ನಿಲ್ಲಿಸಬೇಕಾಯಿತು, ಅನಂತರ ಸಹಿತ ಅವನ್ನು ಸ್ಪೇಫ್ ಸ್ಪೇಜ್‌ಗೆ ತರಲು ಆದೇಶ ಕೊಟ್ಟಿದ್ದೆವು. ಈಗಾಗಲೇ ಷುರು ಮಾಡಿದ್ದಾರೆ.

ಶ್ರೀ ಕೆ. ಎಚ್ ರಂಗನಾಥ್.—ಉತ್ತರದಲ್ಲಿ ಹಣ ಖರ್ಚುಮಾಡಿರುವುದು 6.96 ಕೋಟಿ ಎಂದು ಹೇಳಿದ್ದೀರಿ, ನೀವು ಕೊಟ್ಟಿರುವ ಎಸ್ಟಿಮೇಟ್ಸ್‌ನಲ್ಲಿ 8.10 ಕೊಟಿ ಎಂದು ಹೇಳಿದ್ದೀರಲ್ಲಾ ಇದರಲ್ಲಿ ಯಾವುದು ಸರಿ ಯಾವುದು ತಪ್ಪು ?

ಶ್ರೀ ಎಚ್. ವಿ. ಕೌಜಲಗಿ.—ಅವರು ಕೇಳಿದ ಪ್ರಶ್ನೆ ಡಿಸೆಂಬರ್ 68ರ ವರೆಗೂ ಖರ್ಚು ಮಾಡಿದ ಹಣ ಎಷ್ಟು ಅಂತ ಆ ಅವಧಿಯಲ್ಲಿ ಖರ್ಚಾಗಿರುವ ಹಣ ತೋರಿಸಲಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ತಾವು ತೋರಿಸಿರತಕ್ಕ ಎಲ್ಲಾ ಐಟಂಸ್ ಕೂಡ ಸೇರಿಸಿದರೆ 8.10 ಕೋಟಿ ರೂಪಾಯಿ ಆಗುತ್ತದೆ. ಹಾಗಾದರೆ ಡಿಸೆಂಬರ್ ಒಂದು ತಿಂಗಳಿನಲ್ಲಿ ಎರಡು ಕೋಟಿ ರೂಪಾಯಿ ಖರ್ಚು ಮಾಡಿದ್ದೀರಾ ?

Sri H. V. KOUJALGI.—I have not got that book with me. So far I can remember, that includes some amount spent at the end of 1967.

ಶ್ರೀ ಎಸ್. ಎಸ್. ಅರಕೇರಿ.—ಬಿಜಾಪುರ ಜಿಲ್ಲೆಗೆ 21 ಲಕ್ಷದ 69 ಸಾವಿರದ 574 ರೂಪಾಯಿ ಡಿಸೆಂಬರ್ ಕೊನೆಯವರೆಗೂ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ. ಅಷ್ಟೂ ಹಣ ಖರ್ಚಾಗಿದೆಯೇ ? ಖರ್ಚಾಗಿಲ್ಲದೆ ಇದ್ದರೆ ಎಷ್ಟು ಹಣ ಉಳಿತಾಯವಾಗಿದೆ ?

Sri H. V. KOUJALGI.—All this information has been given in the booklet supplied to the Members.

ಶ್ರೀ ಎನ್. ಎ. ಜನ್ನೇಗೌಡ.—ಕ್ಷಾಮಪರಿಹಾರದ ಅಂಗವಾಗಿ ಹುಲ್ಲು ಸಾಗಾಣಿಕೆ ಮತ್ತು ಹುಲ್ಲಿಗೆ ಎಷ್ಟು ಖರ್ಚು ಮಾಡಿದ್ದೀರಿ. ಈಗ ಅಭಾವವಿರತಕ್ಕ ಪ್ರದೇಶಗಳಲ್ಲಿ ಹುಲ್ಲನ್ನು ಸಾಗಿಸುವುದಕ್ಕೆ ಪಿ.ಡಬ್ಲ್ಯೂ.ಡಿ. ರಾರಿಯನ್ನು ಕೇಳಿದರೆ ಕೊಡುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ನನಗೆ ತಿಳಿದ ಪ್ರಕಾರ ಹುಲ್ಲು ಸಾಗಿಸಲಿಕ್ಕೆ ಏನೂ ಹಣವನ್ನು ಕೊಟ್ಟಿಲ್ಲ ಮತ್ತು ಆ ಬಗ್ಗೆ ನಾವು ಹಣ ಖರ್ಚು ಮಾಡಿಲ್ಲ.

ಶ್ರೀ ಪಿ. ವೆಂಕಟಗಿರಿಗೌಡ.—ಕ್ಷಾಮ ಪರಿಹಾರ ನಿಧಿಯ ಹಣವನ್ನು ಖರ್ಚುಮಾಡಿರತಕ್ಕ ಬಗ್ಗೆ ಏನಾದರೂ ಒಂದು ಪ್ರೊಸೀಜರನ್ನು ಅನುಸರಿಸಲಾಗಿದೆಯೇ ಅಥವಾ ಅದರ ಬಗ್ಗೆ ಏನಾದರೂ ಕಮಿಟಿಗಳನ್ನು ಮಾಡಲಾಗಿತ್ತೇ?

ಶ್ರೀ ಎಚ್. ವಿ. ಕೌಜಲಗಿ.—ಪ್ರತಿಯೊಂದು ತಾಲ್ಲೂಕ್ ಲೆವಿಲ್ಲಿನಲ್ಲೂ ಒಂದೊಂದು ಕ್ಷಾಮ ಪರಿಹಾರ ಕಮಿಟಿಯನ್ನು ರಚನೆ ಮಾಡಲಾಗಿತ್ತು. ಅದರ ಶಿಫಾರ್ಸಿನ ಮೇರೆ ಕೆಲಸಗಳನ್ನು ಮಾಡಲಾಗಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈಗತಾನೆ ಮಾನ್ಯ ಸಚಿವರು ಅಷ್ಟಣೆ ಕೊಡಿಸಿದಂತೆ ಈ ಕ್ಷಾಮಪರಿಹಾರ ಕಾರ್ಯಗಳನ್ನು ತಾಲ್ಲೂಕ್ ಮಟ್ಟದಲ್ಲಿ ರಚಿಸಲಾಗಿದ್ದ ಅಡ್ವೈಜರಿ ಕಮಿಟಿಗಳ ಒಪ್ಪಿಗೆಯನ್ನು ಪಡೆದು ಕೆಲಸಗಳನ್ನು ಕಂಟ್ರಾಕ್ಟ್ ಕೊಟ್ಟಿದ್ದರೂ ಆ ಕಂಟ್ರಾಕ್ಟರುಗಳು ಅವರ ಸ್ವಂತ ಕೆಲಸಗಳನ್ನು ಮಾತ್ರ ಆ ಹಣದಿಂದ ಮಾಡಿಕೊಂಡು ಸಾರ್ವಜನಿಕರ ಕೆಲಸಗಳನ್ನೇನನ್ನೂ ಮಾಡಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ವಿ. ಕೌಜಲಗಿ.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ತುಮಕೂರು ಜಿಲ್ಲೆ ಯಾವತ್ತೂ ಕ್ಷಾಮಕ್ಕೆ ಹೆಸರಾದ ಜಿಲ್ಲೆ. ಆ ಜಿಲ್ಲೆಯಲ್ಲಿರತಕ್ಕ ಪಾವಗಡ, ಮಧುಗಿರಿ, ಕೊರಟಗೆರೆ ಮತ್ತು ತುಮಕೂರು ತಾಲ್ಲೂಕಿನ ಕೆಲವು ಭಾಗ ಮತ್ತು ಶಿರಾ ತಾಲ್ಲೂಕುಗಳಲ್ಲಿ ಯಾವತ್ತೂ ಕ್ಷಾಮ ಇದ್ದುದೇ. ಆದ್ದರಿಂದ ಅಲ್ಲಿ ಇನ್ನು ಅನೇಕ ಕೆಲಸಗಳು ಅರ್ಧಂಬರ್ಧ ಆಗಿರುತ್ತವೆ. ಅಂಥ ಕೆಲಸಕಾರ್ಯಗಳನ್ನು ಕೈಗೊಂಡು ಅವುಗಳನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುವರೇ?

ಶ್ರೀ ಎಚ್. ವಿ. ಕೌಜಲಗಿ.—ಹಾಲಿ ಮುಗಿಯದೆ ಹಾಗೆ ನಿಂತಿರತಕ್ಕ ಕೆಲಸಗಳನ್ನು ಮುಂದುವರಿಸಲು ಸೂಚನೆಯನ್ನು ಕೊಡಲಾಗಿದೆ. ಇನ್ನೂ ಹೆಚ್ಚಿನ ಕೆಲಸಗಳನ್ನು ಈ ಬಾಬಿನಲ್ಲಿ ಕೈಗೊಳ್ಳಲು ಅದನ್ನು ವಿಚಾರ ಮಾಡಿ ಕೈಗೊಳ್ಳಬೇಕಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಶ್ರೀವಾನ್ ವೆಂಕಟಗಿರಿಯಪ್ಪನವರ ಪ್ರಶ್ನೆಗೆ ಉತ್ತರ ಕೊಡುತ್ತ ಮಾನ್ಯ ಸಚಿವರು ಕ್ಷಾಮಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಒಂದು ಸಮಿತಿಯನ್ನು ತಾಲ್ಲೂಕ್ ಮಟ್ಟದಲ್ಲಿ ನೇಮಕ ಮಾಡಲಾಗಿತ್ತು ಎಂದು ಹೇಳಿದರು. ಅಲ್ಲದೆ ನನಗೆ ಗೊತ್ತಿದ್ದ ಹಾಗೆ ಪ್ರತಿಯೊಂದು ಜಿಲ್ಲೆಗೂ ಒಬ್ಬೊಬ್ಬ ಮಂತ್ರಿಗಳನ್ನು ಅಂದರೆ ಆಯಾಯ ಜಿಲ್ಲೆಯ ಮಂತ್ರಿಗಳನ್ನು ಆಯಾಯ ಜಿಲ್ಲೆಗಳಿಗೆ ಈ ಹಣವನ್ನು ವಿತರಣೆ ಮಾಡತಕ್ಕ ಬಗ್ಗೆ ನೇಮಕ ಮಾಡಲಾಗಿತ್ತು. ಆದರೆ ಈ ಕಾರ್ಯಗಳೆಲ್ಲಾ ಆ ತಾಲ್ಲೂಕಿನ ಮಟ್ಟದಲ್ಲಿ ನೇಮಕ ಮಾಡಲಾಗಿದ್ದ ಸಮಿತಿಯ ಶಿಫಾರ್ಸಿನ ಮೇರೆ ನಡೆಯದೆ ಮಂತ್ರಿಗಳು ಹೇಳಿದಂತೆ ಇಂಥವರಿಗೆ ಜೋಳವನ್ನು ಉಚಿತವಾಗಿ ಕೊಡು, ಇಂಥವರಿಗೆ ಉಚಿತವಾಗಿ ಹಾಲನ್ನು ಕೊಡು ಇಂಥವರಿಗೇ ಈ ಕೆಲಸದ ಕಾಂಟ್ರಾಕ್ಟನ್ನು ಕೊಡು. ಆ ಕೆಲಸಗಳನ್ನು ಕೊಡತಕ್ಕ ಬಗ್ಗೆ ಜಿಲ್ಲಾಧಿಕಾರಿಗಳು ಒಪ್ಪಲಿ, ಒಪ್ಪದಿರಲಿ ಅದನ್ನು ಮನಸ್ಸಿಗೇ ಹಾಕಿಕೊಳ್ಳದೆ, ಮಂತ್ರಿಗಳು ತಮ್ಮ ಮನಸೋ ಇಚ್ಛೆ ಕೆಲಸಮಾಡಿಸ್ಕಾರೆಂಬುದು ನಿಜವೇ! ಹಾಗಿದ್ದರೆ ಸರ್ಕಾರದವರು ನಿಮ್ಮ ಅಧಿಕಾರಿಗಳನ್ನೇ ನೇಮಕ ಮಾಡಿ ಇದನ್ನು ಪರ್ಯಾಲೋಚನೆ ಮಾಡಿ ಒಂದು ವರದಿಯನ್ನು ಈ ಸಭೆಗೆ ಒಪ್ಪಿಸುವರೇ?

ಶ್ರೀ ಎಚ್. ವಿ. ಕೌಜಲಗಿ.—ಇಂಥವರಿಗೆ ಕಂಟ್ರಾಕ್ಟ್ ಕೊಡಿ, ಇಂಥವರಿಗೇ ಕೂಲಿ ಕೊಡಿ ಇಂಥವರಿಗೇ ಜೋಳ ಕೊಡಿ, ಇಂಥವರಿಗೇ ಹಾಲನ್ನು ಕೊಡಿ ಎಂದು ಹೇಳಿರತಕ್ಕ ದೂರುಗಳೇನೂ ನಮಗೆ ಬಂದಿಲ್ಲ. ಆದರೆ ಒಂದೆರಡು ಕಡೆ ಇಂಥವರಿಗೇ ಕೂಲಿ ಕೆಲಸ ಕೊಡಿ ಎಂದು ಹೇಳಿದ ನಿದರ್ಶನಗಳು ನಮ್ಮ ಜನರಿಗೆ ಬಂದಿದ್ದವು. ಅಂಥ ಸಂದರ್ಭದಲ್ಲಿ ನಾವು ಚೌಕಾಸಿ ಮಾಡಿದ್ದೇವೆ, ಅಂಥವರಿಗಿನ್ನೂ ದುಡ್ಡನ್ನು ಸರ್ಕಾರ ಕೊಟ್ಟಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕ್ಷಾಮಪರಿಹಾರ ಕಾರ್ಯಕ್ಕಾಗಿ ಖರ್ಚಾಗಿರತಕ್ಕದ್ದು 4 ಕೋಟಿ 38 ಲಕ್ಷ 63 ಸಾವಿರ ಎಂದು ಒಂದರಲ್ಲಿದೆ, ಇನ್ನೊಂದರಲ್ಲಿ 3 ಕೋಟಿ 14 ಲಕ್ಷ ಎಂದು ಇದೆ. ಆದ್ದರಿಂದ ಖಚಿತವಾದ ಅಂಕಿ ಅಂಶಗಳನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲವೇ?

Sri H. V. KOUJALGI.—I will verify and say afterwards, Sir.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿರ್ದಿಷ್ಟವಾದ ಅಂಕಿಅಂಶಗಳಿಲ್ಲ ಎಂದು ಮಾನ್ಯ ಸಚಿವರು ಅಷ್ಟಣೆ ಕೊಡಿಸುತ್ತಿರುವುದರಿಂದ ಈ ಪ್ರಶ್ನೆಯನ್ನು ತಡೆಹಿಡಿದು ಇದೇ ಅಧಿವೇಶನದ ಕಡೆಯ ದಿನ ಇದನ್ನು ಮತ್ತೆ ತೆಗೆದುಕೊಳ್ಳುವಂತೆ ಅಧ್ಯಕ್ಷರು ಮಂತ್ರಿಗಳಿಂದ ಭರವಸೆಯನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವೇ?

ಶ್ರೀ ಎಚ್. ವಿ. ಕೌಜಲಗಿ.—ಇದರಲ್ಲಿ ಸರ್ಕಾರದವರು ಯಾವುದನ್ನೂ ಮುಚ್ಚುಮರೆ ಮಾಡಿಟ್ಟಿಲ್ಲ. ಅವರಿಗೆ ಇಂಥ ಹೆಚ್ಚಿನ ಮಾಹಿತಿ ಬೇಕಾದರೆ ಅದನ್ನು ಒದಗಿಸುತ್ತೇನೆ.

1-30 P.M.

ಶ್ರೀ ಎಸ್. ಶಿವಪ್ಪ.—ಜಿಲ್ಲಾವಾರು ಕ್ಷಾಮ ಪರಿಹಾರ ಕೆಲಸ ನಡೆದಿರುವುದು ಹೇಗಿದೆ ಎಂದರೆ, ಆಯಾ ಮಂತ್ರಿಗಳ ಜಿಲ್ಲೆಯೊಳಗೆ ಹೆಚ್ಚು ಮೊಬಲಗನ್ನು ಕೊಟ್ಟಿದ್ದಾರೆ. ಒಂದೊಂದು ಜಿಲ್ಲೆಗೆ 9ಲಕ್ಷ, ನಮ್ಮ ಜಿಲ್ಲೆಗೆ 11 ಲಕ್ಷ ಧಾರವಾಡ ಜಿಲ್ಲೆಗೆ 43 ಲಕ್ಷ ಹೀಗೆ ಕೊಚ್ಚಿರುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳ ಜಿಲ್ಲೆಗೆ ಎಷ್ಟು ಕೊಟ್ಟಿದ್ದಾರೆಂಬುದನ್ನು ತಾವು ನೋಡಿ.

ಶ್ರೀ ಎಚ್. ವಿ. ಕೌಜಲಗಿ.— ಮಾನ್ಯ ಶ್ರೀ ಶಿವಪ್ಪನವರ ಜಿಲ್ಲೆಯಲ್ಲಿ ಕೇವಲ ಎರಡು ಮೂರು ತಾಲ್ಲೂಕುಗಳಿಗೆ ಕ್ಷಾಮ ಎಫೆಕ್ಟ್ ಆಗಿದೆ. ಆದ್ದರಿಂದ ಅವರ ಜಿಲ್ಲೆಗೆ ಹೆಚ್ಚು ಖರ್ಚಾಗಿದೆಯೆಂದು ನಾನು ಸಿದ್ಧಮಾಡಿಕೊಡುತ್ತೇನೆ.

Development of Air Strip

360. **Sri M. NAGAPPA** (Raichur).—

Will the Minister for Public Works be pleased to state :—

whether there is any scheme before Government to recommend to the Government of India to develop the Air Strip at Yermaras Village, Raichur Taluk as an Aerodrome in view of the fact that the Raichur District is declared as Intensive Agriculture District ?

Sri B. V. MAGAVI (Deputy Minister for Public Works).—

No.

ಶ್ರೀ ಎಂ. ನಾಗಪ್ಪ.—ಉತ್ತರದಲ್ಲಿ ಇಲ್ಲವೆಂದು ಹೇಳಿದ್ದೀರಿ. ಇದರಿಂದ ಇದನ್ನು ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಮನಸ್ಸು ಇಲ್ಲವೋ ಅಥವಾ ಇದನ್ನು ಶಿಫಾರಸು ಮಾಡಿದರೆ ಕೇಂದ್ರ ಸರ್ಕಾರದವರು ಇದನ್ನು ಪರ್ಯಾಲೋಚಿಸುವುದಿಲ್ಲವೆಂಬ ಭಾವನೆಯೇ ?

† ಶ್ರೀ ಬಿ. ವಿ. ಮಾಗಾವಿ.—ಇದರ ಬಗ್ಗೆ ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಯೇಷನ್ ಅವರು ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿದ್ದಾರೆ. ಅದು 6 ಲಕ್ಷ 87 ಸಾವಿರ ರೂಪಾಯಿಗಳಾಗುತ್ತದೆಂದು ತಿಳಿಸಿದ್ದಾರೆ. ಆದರೆ ಸಾಕಷ್ಟು ಟ್ರಾಫಿಕ್ ಪೊಟೆನ್‌ಷಿಯರ್ ಆಗುವುದಿಲ್ಲವೆಂದು ಅವರು ಅದನ್ನು ತಟಸ್ಥಮಾಡುತ್ತಿದ್ದಾರೆ.

ಶ್ರೀ ಎಂ. ನಾಗಪ್ಪ.—ತಮ್ಮ ಅವಗಾಹನೆಗೆ ಈ ಒಂದು ವಿಷಯ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಅವರು ಸಾಕಷ್ಟು ಟ್ರಾಫಿಕ್ ಪೊಟೆನ್‌ಷಿಯರ್ ಇಲ್ಲವೆಂದು ಅದನ್ನು ಅಭಿವೃದ್ಧಿಮಾಡದಿದ್ದರೆ, ಡೈಲ ಹಿಂದೂ ಅವರು ಅವರ ಪತ್ರಿಕೆಗಳನ್ನು ಬೆಂಗಳೂರಿನಿಂದ ರಾಯಚೂರು, ಹೈದರಾಬಾದ್‌ನಿಂದ ರಾಯಚೂರು ಬೆಂಗಳೂರು ರನ್‌ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆದಕಾರಣ ಅದನ್ನು ಏರೋಡ್ರೊಂ ಆಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ವಿ. ಮಾಗಾವಿ.—ಆ ಒಂದು ಪತ್ರಿಕೆ ಸರ್ವಿಸ್‌ಗೋಸ್ಕರ ಅದನ್ನು ಮಾಡಬೇಕೆಂದರೆ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಸಾಕಷ್ಟು ಪ್ಯಾಸಂಜರ್ಸ್ ಪೊಟೆನ್‌ಷಿಯರ್ ಇರಬೇಕಾಗಿದೆ. ಐ. ಎ. ಸಿ. ಯವರು ರೆಗ್ಯುಲರ್ ಸರ್ವಿಸ್ ಇಟ್ಟಿದ್ದರೆ ಅದನ್ನು ಒಪ್ಪಿಕೊಳ್ಳುತ್ತೇವೆ.